# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 217 | Pages. 2 | Date: 07-08-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 217 - ಪುಟಗಳು : 2 | 07-08-2026 ಶುಕ್ರವಾರ | Ph: 8762954248 | ದರ : ₹1


# ಬರ: ವಿಶೇಷ ಪ್ಯಾಕೇಜ್‌ಗೆ ಸರ್ಕಾರಕ್ಕೆ ಆಗ್ರಹ

## ಸಚಿವ ಕೆ.ಎಂ.ಶಿವಲಿಂಗೇಗೌಡರಿಂದ ಬರ ಅಧ್ಯಯನ | ಅಧಿಕಾರಿಗಳಿಂದ ಮಾಹಿತಿ ಸಂಗ್ರಹ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಿಳಿಸುಳಿ ರೋಗದಿಂದ ಹಾಳಾಗಿರುವ ಮೆಕ್ಕೆಜೋಳಕ್ಕೆ ತಕ್ಷಣ ಮಧ್ಯಂತರ ಪರಿಹಾರ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗುವುದು. ಬೆಳೆ ವಿಮೆ ಕಟ್ಟಿರುವ ರೈತರಿಗೆ ಶೀಘ್ರ ವಿಮೆ ಪರಿಹಾರ ದೊರಕುವಂತೆ ಕ್ರಮ ಕೈಗೊಳ್ಳುವುದರ ಜೊತೆಗೆ ವಿಶೇಷ ಪ್ಯಾಕೇಜ್ ನೀಡುವಂತೆ ಸರ್ಕಾರದ ಮಟ್ಟದಲ್ಲಿ ಒತ್ತಾಯಿಸಲಾಗುವುದು ಎಂದು ಸಚಿವ ಕೆ.ಎಂ.ಶಿವಲಿಂಗೇಗೌಡ ಭರವಸೆ ನೀಡಿದರು.

ಹಾಸನ, ಸಕಲೇಶಪುರ, ಬೇಲೂರು ತಾಲ್ಲೂಕಿನ ವಿವಿಧೆಡೆ ಗುರುವಾರ ಜಮೀನುಗಳಿಗೆ ಭೇಟಿ ನೀಡಿ ರೈತರ ಅಹವಾಲು ಆಲಿಸಿ ಮಾತನಾಡಿದ ಅವರು, ಜಿಲ್ಲಾಧಿಕಾರಿ ನೇತೃತ್ವದಲ್ಲಿ ರೈತ ಮುಖಂಡರು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳನ್ನೊಳಗೊಂಡ ತಂಡ ರಚಿಸಿ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ ರೈತರಿಗೆ ಸೂಕ್ತ ನ್ಯಾಯ ದೊರಕಿಸಿಕೊಡಲಾಗುವುದು ಎಂದು ಹೇಳಿದರು.

ರೈತರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಬಗ್ಗೆ ಸತ್ಯಾಸತ್ಯತೆ ಪರಿಶೀಲಿಸಲಾಗುವುದು. ತಪ್ಪು ಗ್ರಹಿಕೆಯಿಂದ ನೋಟಿಸ್ ನೀಡಿದ್ದರೆ ರೈತರಿಗೆ ನ್ಯಾಯ ಒದಗಿಸಲಾಗುವುದು ಎಂದು ನುಡಿದರು.

ರೈತರು ಯಾವುದೇ ಆತಂಕಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿದ ಸಚಿವರು, ಮೆಕ್ಕಜೋಳ ಸೇರಿ ಹಲವು ಬೆಳೆ ಸಂಪೂರ್ಣ ಹಾನಿಗೊಳಗಾಗಿರುವ ಹಿನ್ನೆಲೆ ಮಧ್ಯಂತರ ಪರಿಹಾರ, ಬೆಳೆ ವಿಮೆ ಹಾಗೂ ಎನ್‌ಡಿಆರ್‌ಎಫ್ ಮಾರ್ಗಸೂಚಿಯಡಿ ವಿಶೇಷ ಪ್ಯಾಕೇಜ್ ನೀಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ಎಸ್‌ಪಿ ಶುಭಾನ್ವಿತಾ, ಮಾಜಿ ಸಚಿವ ಬಿ.ಶಿವರಾಂ, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದಶಿ, ಬಳ್ಳೂರು ಸ್ವಾಮಿಗೌಡ, ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಇದ್ದರು.

ಸಕಲೇಶಪುರ ಕ್ಷೇತ್ರದಲ್ಲೂ ಅಧ್ಯಯನ: ಬುಧವಾರ ಮೂರು ತಾಲೂಕು ವ್ಯಾಪ್ತಿಯಲ್ಲಿ ಬರ ಹಾಗೂ ಅತಿವೃಷ್ಟಿ ಅಧ್ಯಯನ ನಡೆಸಿದ್ದ ಸಚಿವರು 2ನೇ ದಿನವೂ ಆಲೂರು-ಸಕಲೇಶಪುರ, ಬೇಲೂರು ಹಾಗೂ ಹಾಸನ ಕ್ಷೇತ್ರ ವ್ಯಾಪ್ತಿಯಲ್ಲಿ ಅಧ್ಯಯನ ನಡೆಸಿದರು.

ಬೆಳಗ್ಗೆ ಕಟ್ಟಾಯ ಹೋಬಳಿಯ ಶಂಕರನಹಳ್ಳಿ ಗ್ರಾಮದಲ್ಲಿ ಮುಸುಕಿನ ಜೋಳಕ್ಕೆ ಹರಡಿರುವ ಬಿಳಿ ಸುಳಿ ರೋಗದ ತಾಕುಗಳ ವೀಕ್ಷಣೆ ನಡೆಸಿದರು. ನಂತರ ಕಾರ್ಲೆ-ಅಂಕಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬನವಾಸೆ ಗ್ರಾಮದಲ್ಲಿ ಮುಸುಕಿನ ಜೋಳಕ್ಕೆ ಹರಡಿರುವ ಬಿಳಿ ಸುಳಿ ರೋಗದ ತಾಕುಗಳ ವೀಕ್ಷಣೆ ನಡೆಸಿದರು.

## ಎಕರೆಗೆ 75 ಸಾವಿರ ರೂ. ಪರಿಹಾರಕ್ಕೆ ಆಗ್ರಹ

ಆಲೂರು: ಮುಸುಕಿನ ಜೋಳ ಬೆಳೆಗೆ ವ್ಯಾಪಕವಾಗಿ ಬಿಳಿ ಸುಳಿ ರೋಗ ಹರಡಿರುವ ಹಿನ್ನೆಲೆಯಲ್ಲಿ ರೈತರಿಗೆ ಪ್ರತಿ ಎಕರೆಗೆ 50 ರಿಂದ 75 ಸಾವಿರ ರೂ. ವರೆಗೆ ಪರಿಹಾರ ಘೋಷಿಸಬೇಕು. ಜೊತೆಗೆ ಗೊರೂರು ಹೇಮಾವತಿ, ಯಗಚಿ ಹಾಗೂ ವಾಟೆಹೊಳೆ ಜಲಾಶಯಗಳ ಕಾಲುವೆಗಳ ಮೂಲಕ ಕೃಷಿ ಚಟುವಟಿಕೆ ಮತ್ತು ಜಾನುವಾರುಗಳ ಕುಡಿಯುವ ನೀರಿಗಾಗಿ ತಕ್ಷಣ ನೀರು ಹರಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಸಚಿವ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಸಚಿವರಿಂದ ಬರ ವೀಕ್ಷಣೆ ವೇಳೆ ಮನೆಗೆ ಸಲ್ಲಿಸಿ ಮಾತನಾಡಿದ ಶಾಸಕರು,ಸಕಲೇಶಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಆಲೂರು ತಾಲ್ಲೂಕು ಹಾಗೂ ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿಯಲ್ಲಿ ಪ್ರಮುಖವಾಗಿ ಬೆಳೆದಿರುವ ಮುಸುಕಿನ ಜೋಳ ಬೆಳೆಗೆ ಈ ಬಾರಿ ಬಿಳಿಸುಳಿ ರೋಗ ತೀವ್ರವಾಗಿ ಹರಡಿದೆ.

ಹೊಲಗಳ ಹೊರಭಾಗದಿಂದ ಬೆಳೆ ಹಸಿರಾಗಿ ಕಂಡರೂ, ಒಳಭಾಗದಲ್ಲಿ ಶೇ.90ಕ್ಕೂ ಹೆಚ್ಚು ಗಿಡಗಳು ರೋಗಬಾಧೆಗೆ ಒಳಗಾಗಿರುವುದು ಸ್ಥಳ ಪರಿಶೀಲನೆಯ ವೇಳೆ ಕಂಡುಬಂದಿದೆ. ಕಳೆದ ವರ್ಷ ಸೀಮಿತ ಪ್ರಮಾಣದಲ್ಲಿದ್ದ ರೋಗ ಈ ಬಾರಿ ವ್ಯಾಪಕವಾಗಿ ಹರಡಿದ್ದು, ಸಾವಿರಾರು ರೈತರು ಭಾರೀ ನಷ್ಟ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆಯಿಂದ ಹಾಸನ ಜಿಲ್ಲೆಯಲ್ಲಿ ಬರದಂತಹ ಪರಿಸ್ಥಿತಿ



ನಿರ್ಮಾಣವಾಗಿದೆ. ಹೇಮಾವತಿ, ಯಗಚಿ ಹಾಗೂ ವಾಟೆಹೊಳೆ ಜಲಾಶಯಗಳಿಗೆ ನೀರಿನ ಒಳಹರಿವು ಕಡಿಮೆಯಾಗಿರುವುದರಿಂದ ಕೆರೆ-ಕಟ್ಟೆಗಳು ಹಾಗೂ ಬಾವಿಗಳು ಬರಿದಾಗುತ್ತಿವೆ. ಇದರ ಪರಿಣಾಮವಾಗಿ ರೈತರ ಕೃಷಿ ಚಟುವಟಿಕೆ ಹಾಗೂ ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗುವ ಆತಂಕ ಎದುರಾಗಿದೆ ಎಂದು ತಿಳಿಸಿದ್ದಾರೆ.

ಹೀಗಾಗಿ ಗೊರೂರು ಹೇಮಾವತಿ ಜಲಾಶಯದ ಎಡದಂಡೆ ನಾಲೆ, ಯಗಚಿ ಎಡದಂಡೆ ನಾಲೆ ಹಾಗೂ ವಾಟೆಹೊಳೆ ಜಲಾಶಯದ ಎಡ ಮತ್ತು ಬಲದಂಡೆ ಕಾಲುವೆಗಳ ಮೂಲಕ ತಕ್ಷಣ ನೀರು ಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಸಚಿವ ಶಿವಲಿಂಗೇಗೌಡ ಅವರಿಗೆ ಮನವಿ ಮಾಡಿದ್ದಾರೆ.

## 2.5 ಲಕ್ಷ ರೂ. ಮೌಲ್ಯದ ಎಂಡಿಎಂಎ ಜಪ್ತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಾದಕ ವಸ್ತು ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಯನ್ನು ಬಂಧಿಸಿರುವ ಪೊಲೀಸರು ಆತನಿಂದ ಸುಮಾರು 2.5 ಲ.ರೂ. ಮೌಲ್ಯದ 25 ಗ್ರಾಂ ಎಂಡಿಎಂಎ ಮಾದಕ ವಸ್ತು ವಶಪಡಿಸಿಕೊಂಡಿದ್ದಾರೆ.

ಆ. 5ರಂದು ಮಧ್ಯಾಹ್ನ ಸುಮಾರು 2.15 ಗಂಟೆಗೆ ಗುರುದೇವ ಪೆಟ್ರೋಲ್ ಬಂಕ್ ಸಮೀಪದ ನಾಗ್‌ಎನ್‌ಕ್ಲೇವ್ ಲೇ ಔಟ್ ಬಳಿ ಮಾದಕ ವಸ್ತು ಮಾರಾಟ ನಡೆಯುತ್ತಿರುವ ಬಗ್ಗೆ ಖಚಿತ ಮಾಹಿತಿ ಪಡೆದ ನಗರ ಪೊಲೀಸರು ದಾಳಿ ನಡೆಸಿದರು. ಕೊಡಗು ಜಿಲ್ಲೆಯ ಮೂಲದ ಅಜರುದ್ದೀನ್ ಎಂಬಾತನನ್ನು ಬಂಧಿಸಲಾಯಿತು.

ಆರೋಪಿ ಕಾರು ಪರಿಶೀಲನೆ ನಡೆಸಿದ ವೇಳೆ 25 ಗ್ರಾಂ ಎಂಡಿಎಂಎ ಮಾದಕ ವಸ್ತು ಪತ್ತೆಯಾಗಿದ್ದು, ಪೊಲೀಸರು ವಶಪಡಿಸಿಕೊಂಡಿದ್ದಾರೆ. ವಶಪಡಿಸಿಕೊಂಡ ಮಾದಕ ವಸ್ತುವಿನ ಅಂದಾಜು ಮೌಲ್ಯ 2.5 ಲಕ್ಷ ರೂ. ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಸಕಲೇಶಪುರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನಗರ ಪೊಲೀಸ್ ಇನ್‌ಸ್ಪೆಕ್ಟರ್ ವನರಾಜು ಮಾರ್ಗದರ್ಶನದಲ್ಲಿ ಅಪರಾಧ ವಿಭಾಗದ ಸಬ್‌ಇನ್‌ಸ್ಪೆಕ್ಟರ್ ಕೆ.ಎಸ್. ಕೃಷ್ಣಪ್ಪ ಅವರ ನೇತೃತ್ವದಲ್ಲಿ ಸಿಬ್ಬಂದಿ ಖಾದರ್ ಅಲಿ, ಎಸ್.ಜೆ.ರೇವಣ್ಣ, ಶ್ರೀಧರ್, ರಾಕೇಶ್, ಸೋಮಶೇಖರ್, ಅಶೋಕ್, ಸುನಿಲ್ ಕುಮಾರ್, ಹನುಮಂತು, ಶಿವಕುಮಾರ್ ಹಾಗು ಚಾಲಕ ಮಧು ಕಾರ್ಯಾಚರಣೆಯಲ್ಲಿ ಭಾಗವಹಿಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ಚೌಡೇನಹಳ್ಳಿಯಲ್ಲಿ ಮಣ್ಣು ಪರೀಕ್ಷೆ ಜಾಗೃತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಕಾರೆಕೆರೆ ಕೃಷಿ ಮಹಾವಿದ್ಯಾಲಯ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ಚೌಡೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಮಣ್ಣು ಪರೀಕ್ಷೆ ಹಾಗೂ ಮಣ್ಣಿನ ಆರೋಗ್ಯದ ಕುರಿತು ಜಾಗೃತಿ ಜಾಥಾ ನಡೆಸಿದರು.

ವಿದ್ಯಾರ್ಥಿಗಳು ಮಣ್ಣಿನ ಮಾದರಿಯನ್ನು ವೈಜ್ಞಾನಿಕವಾಗಿ ಸಂಗ್ರಹಿಸುವ ವಿಧಾನವನ್ನು ಹಂತ ಹಂತವಾಗಿ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಮಣ್ಣು ಪರೀಕ್ಷಾ ವರದಿ ದೊರೆಯಲು ಬೇಕಾಗುವ ಸಮಯ, ಮಣ್ಣು ಪರೀಕ್ಷೆಯ ಮಹತ್ವ ಹಾಗೂ ಅದರ ಮೂಲಕ ಬೆಳೆಗಳಿಗೆ ಸಮತೋಲನ ಪೋಷಕಾಂಶ ನಿರ್ವಹಣೆ, ಉತ್ಪಾದಕತೆ ಹೆಚ್ಚಳ ಮತ್ತು ವೆಚ್ಚ ಕಡಿತದಂತಹ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರು.



ಮಣ್ಣಿನ ಮಾದರಿ ಸಂಗ್ರಹಿಸಿದ ನಂತರ ಲೇಬಲ್ ಅಳವಡಿಸುವ ವಿಧಾನ ಹಾಗು ಲೇಬಲ್‌ನಲ್ಲಿ ದಾಖಲಿಸಬೇಕಾದ ಅಗತ್ಯ ಮಾಹಿತಿಗಳ ಕುರಿತು ಸಹ ರೈತರಿಗೆ ತಿಳಿಸಿಕೊಡಲಾಯಿತು. 30ಕ್ಕೂ ಅಧಿಕ ರೈತರು ಪಾಲ್ಗೊಂಡಿದ್ದರು.

## ಆ. 8 ರಿಂದ ಜೀ ಕನ್ನಡದಲ್ಲಿ ಹಳ್ಳಿ ಪವರ್ ರಿಲೋಡೆಡ್!




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಜೀ ಕನ್ನಡ ತನ್ನ ಪ್ರೇಕ್ಷಕರಿಗಾಗಿ ಹಳ್ಳಿ ಪವರ್ ರಿಲೋಡೆಡ್ ಎಂಬ ವಿನೂತನ ರಿಯಾಲಿಟಿ ಶೋ ಪರಿಚಯಿಸಲು ಸಜ್ಜಾಗಿದೆ. ಗ್ರಾಮೀಣ ಕರ್ನಾಟಕದ ಸಂಸ್ಕೃತಿ, ಬದುಕಿನ ಸೊಗಡು ಮತ್ತು ಸವಾಲುಗಳನ್ನು ಪರಿಚಯಿಸುವ ಈ ಕಾರ್ಯಕ್ರಮವು ಆತ್ಮವಿಶ್ವಾಸ, ಒಗ್ಗಟ್ಟು ಹಾಗೂ ಜೀವನದ ಹೊಸ ಅನುಭವಗಳನ್ನು ಅನಾವರಣಗೊಳಿಸಲಿದೆ.

ಈ ಸ್ಪರ್ಧಿಗಳಿಗೆ ಟೆಲಿವಿಷನ್, ಮೊಬೈಲ್, ಇಂಟರ್ನೆಟ್ ಸೇರಿ ಯಾವುದೇ ಐಷಾರಾಮಿ ಸೌಲಭ್ಯಗಳು ಸಿಗುವುದಿಲ್ಲ ಮತ್ತು ಹಳ್ಳಿಯ ಸರಳ ಜೀವನಕ್ಕೆ ಒಗ್ಗಬೇಕು ಹಾಗು ಕುಟುಂಬದವರಿಂದ ದೂರವಿರಬೇಕು. ಕೃಷಿ ಕೆಲಸ, ಜಾನುವಾರುಗಳ ಆರೈಕೆ, ಅಡುಗೆ, ಮನೆಯ ಜವಾಬ್ದಾರಿಗಳು, ಹಳ್ಳಿಯ ದಿನನಿತ್ಯದ ಕಠಿಣ ಕೆಲಸಗಳು... ಹೀಗೆ ಪ್ರತಿಯೊಂದು ಸವಾಲೂ ಸ್ಪರ್ಧಿಗಳ ದೈಹಿಕ ಸಾಮರ್ಥ್ಯ ಹಾಗು ಮಾನಸಿಕ ಸ್ಥಿಮಿತತೆಯನ್ನು ಪರೀಕ್ಷಿಸಲಿದೆ. ಎಲ್ಲರ ಅಚ್ಚುಮೆಚ್ಚಿನ ಕರ್ನಾಟಕದ ಹೆಸರಾಂತ ನಿರೂಪಕ ಅಕುಲ್ ಬಾಲಾಜಿ ಅವರು ಹಳ್ಳಿ ಪವರ್ ಶೋ ನ ನಿರೂಪಣಾ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಸ್ನೇಹ ಹೆಚ್, ಬಿ.ಬಿ. ಹಾಜಿರಾ, ಏಂಜೆಲೀನ್, ರಿಗ್ಮ್ಯಾ ರಾಜಶ್ರೀ, ದರ್ಶಿನಿ ಗೌಡ, ಪೂಜಾ ಚಂದ್ರಶೇಖರ್, ಅನಿಷಾ ಲಕ್ಷ್ಮಣ್, ಸುಷ್ಮಾ ತೊಗರೆ, ತೇಜಸ್ವಿನಿ, ಅಂಕಿತ ದೇವ್, ಪೂರ್ವಿಕ ಆರ್.ಕೆ., ಚಿತ್ರಶ್ರೀ, ಪೂರ್ವ ವೈ., ರಚನಾ, ನಿಖಿತಾ ಸ್ವಾಮಿ, ನಿವೇದಿತಾ ರೈ ಹೀಗೆ ಸಿಟಿ ಯಲ್ಲಿ ಬೆಳೆದ ಸ್ಪರ್ಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಹೊಸ ಬದುಕಿಗೆ ಹೊಂದಿಕೊಳ್ಳುವ ಪ್ರಯತ್ನದಲ್ಲಿ, ಸ್ಪರ್ಧಿಗಳ ನಡುವಿನ ಸ್ನೇಹ, ಎದುರಾಗುವ ಸವಾಲುಗಳು, ಗೆಲುವು-ಸೋಲು, ಆತ್ಮವಿಶ್ವಾಸ ಹಾಗೂ ಅವರ ಜೀವನದಲ್ಲಿ ಆಗುವ ಬದಲಾವಣೆಗಳನ್ನು ಪ್ರೇಕ್ಷಕರು ಕಣ್ತುಂಬಿಕೊಳ್ಳಲಿದ್ದಾರೆ. ಹಳ್ಳಿ ಪವರ್ ಪಟ್ಟವನ್ನು ತಮ್ಮದಾಗಿ ಸಿಕೊಳ್ಳುವ ಗುರಿಯೊಂದಿಗೆ ಪ್ರತಿಯೊಬ್ಬ ಸ್ಪರ್ಧಿಯೂ ತಮ್ಮ ಅತ್ಯುತ್ತಮ ಪ್ರದರ್ಶನ ನೀಡಲಿದ್ದು, ಅವರ ಈ ರೋಚಕ ಪಯಣ ಮನರಂಜನೆಯ ಜೊತೆಗೆ ಪ್ರೇಕ್ಷಕರಿಗೆ ಸ್ಫೂರ್ತಿಯನ್ನೂ ಸಹ ನೀಡಲಿದೆ.ಆಗಸ್ಟ್ 8ರಿಂದ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 9:00 ಗಂಟೆಗೆ ಹಾಗೂ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9:30 ಗಂಟೆಗೆ ಜೀ ಕನ್ನಡದಲ್ಲಿ ಪ್ರಸಾರ ಆಗೋ ಹಳ್ಳಿ ಪವರ್ ರಿಲೋಡೆಡ್ ಕಾರ್ಯಕ್ರಮವನ್ನು ತಪ್ಪದೇ ವೀಕ್ಷಿಸಿ.

## 15 ಗೃಹಲಕ್ಷ್ಮಿ ಫಲಾನುಭವಿಗಳಿಗೆ ಅಭಿನಂದನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಮನೆ ಯಜಮಾನ್ತಿಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡುವ ಗೃಹಲಕ್ಷ್ಮಿ ಯೋಜನೆ ಜಾರಿಯಾಗಿ 3 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ತಾಲ್ಲೂಕಿನ ಫಲಾನುಭವಿಗಳಿಗೆ ಅಭಿನಂದಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ 26ನೇ ಮಾಸಿಕ ಸಭೆಯಲ್ಲಿ ಕಸಬಾ ಹೋಬಳಿ ವ್ಯಾಪ್ತಿಯ ಆಯ್ದ 15 ಫಲಾನುಭವಿಗಳಿಗೆ ಅಭಿನಂದಿಸಲಾಯಿತು.

ಸಮಿತಿ ಅಧ್ಯಕ್ಷ ಎಲ್.ಪಿ. ಪ್ರಕಾಶ್‌ಗೌಡ ಮಾತನಾಡಿ, ಗೃಹಲಕ್ಷ್ಮಿ ಯೋಜನೆ ಜಾರಿಯಾಗಿ 3 ವರ್ಷ ಪೂರ್ಣಗೊಂಡ ಹಿನ್ನಲೆಯಲ್ಲಿ ಸಮಿತಿ ರಾಜಾಧ್ಯಕ್ಷ ಹೆಚ್.ಎಂ.ರೇವಣ್ಣ ಅವರ ನಿರ್ದೇಶನದಂತೆ ತಾಲ್ಲೂಕಿನ 40 ಗ್ರಾಮ ಪಂಚಾಯಿತಿಗಳಲ್ಲಿ ಗಿಡನೆಟ್ಟು ಫಲಾನುಭವಿಗಳನ್ನು ಗೌರವಿಸಲಾಗುತ್ತಿದೆ ಎಂದರು.

ಜನಪ್ರಿಯ ಯೋಜನೆಯಾಗಿ ರಾಜ್ಯದ ಮಹಿಳೆಯರ ಸ್ವಾವಲಂಬಿ ಬದುಕಿಗೆ ನೆರವಾಗಿರುವ ಗೃಹಲಕ್ಷ್ಮಿ ಯೋಜನೆಗಾಗಿ 81111 ಫಲಾನುಭವಿಗಳು ನೋಂದಾಯಿಸಿಕೊಡು ತಿಂಗಳಿಗೆ 16 ಕೋ.ರೂ. ಹಣ ಪಡೆಯುತ್ತಿದ್ದಾರೆ. 8.53 ಲಕ್ಷ ಜನರು ಸಂಚಾರ ಮಾಡುವ ಮೂಲಕ 3 ಕೋ.ರೂ. ಇಲಾಖೆಗೆ ಜಮ ಆಗಿದೆ. ಗೃಹಜ್ಯೋತಿಗೆ 72 ಸಾವಿರ ನೋಂದಣಿಯಾಗಿ ಲಾಭ ಪಡೆಯುತ್ತಿದ್ದಾರೆ. ಅನ್ನಭಾಗ್ಯ ಯೋಜನೆ, ಯುವನಿಧಿ ಸೇರಿ 5 ಯೋಜನೆಗಳಿಂದ ತಾಲ್ಲೂಕಿಗೆ ಪ್ರತಿ ತಿಂಗಳು 25 ಕೋ.ರೂ. ಅನುದಾನ ಸರ್ಕಾರದಿಂದ ನೇರವಾಗಿ ಫಲಾನುಭವಿಗಳಿಗೆ ದೊರೆಯುತ್ತಿದೆ. 5 ಯೋಜನೆಗಳ ಸಾಕಾರಕ್ಕಾಗಿ ದುಡಿದ ಅಧಿಕಾರಿಗಳಿಗೆ ಧನ್ಯವಾದ ಎಂದರು.

ಸಮಿತಿ ಸದಸ್ಯ ನವೀನ್ ಮಾತನಾಡಿ, ಸರ್ಕಾರ ನೀಡುವ ಪ್ರತಿ ತಿಂಗಳು 2 ಸಾವಿರ ರೂ. ಸಾಕಷ್ಟು ನೆರವಾಗುತ್ತಿದೆ. ಅನೇಕ ಬಡಕುಟುಂಬಗಳಿಗೆ ಆಸರೆಯಾಗಿದೆ ಎಂದರು.

ಸಭೆಯಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಕಾರ್ಯದರ್ಶಿ ಜಿ.ಆರ್.ಹರೀಶ್, ತಾಲ್ಲೂಕು ಪಂಚಾಯಿತಿ ನಿರ್ದೇಶಕ ಗಿರೀಶ್ ಮತ್ತಿತರರಿದ್ದರು.

# ಜನರ ನೋವು ನಲಿವಿಗೆ ಸ್ಪಂದಿಸುವ ಕೆಲಸವಾಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಜೆಡಿಎಸ್ ಸಂಘಟನೆಯನ್ನು ಗ್ರಾಮ ಮಟ್ಟದಿಂದ ಬಲಪಡಿಸುವ ಜೊತೆಗೆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸವಾಗಬೇಕು ಎಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಹೇಳಿದರು.

ಪಟ್ಟಣದ ಮಾಜಿ ಶಾಸಕರ ನಿವಾಸದಲ್ಲಿ ನಡೆದ ಜೆಡಿಎಸ್ ಎಸ್‌ಸಿ-ಎಸ್‌ಟಿ ಘಟಕದ ಸಭೆಯಲ್ಲಿ ಮಾತನಾಡಿದ ಅವರು, ಸುಮಾರು ಮೂರು ವರ್ಷಗಳ ಬಳಿಕ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರ ಸಭೆ ನಡೆಸಲಾಗುತ್ತಿದ್ದು, ಹಿಂದಿನ ಭಿನ್ನಾಭಿಪ್ರಾಯಗಳನ್ನು ಮರೆತು ಎಲ್ಲರೂ ಒಗ್ಗಟ್ಟಿನಿಂದ ಪಕ್ಷ ಸಂಘಟನೆಗೆ ಶ್ರಮಿಸಬೇಕು ಎಂದರು.

ತಾವು ಶಾಸಕನಾಗಿದ್ದ 15 ವರ್ಷಗಳ ಅವಧಿಯಲ್ಲಿ ಸಾವಿರಾರು ಅಭಿವೃದ್ಧಿ ಕಾಮಗಾರಿಗೆ ಅನುಮೋದನೆ ನೀಡಿದ್ದು, ಸಣ್ಣ ನೀರಾವರಿ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಕಷ್ಟು ಕೆಲಸ ಮಾಡಿದ್ದೇನೆ. ಯಾವುದೇ ಕೆಲಸಕ್ಕೆ ಪ್ರತಿಫಲ ನಿರೀಕ್ಷಿಸಿಲ್ಲ ಎಂದರು.



ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಾಗಿ ಪ್ರತಿ ಅಗತ್ಯ ವಸ್ತುಗಳ ದರ ಹೆಚ್ಚಿಸಿದ್ದಾರೆ. ಈ ತೆರಿಗೆ ಹೆಚ್ಚಳದಿಂದ ಸರ್ಕಾರಕ್ಕೆ ಹೆಚ್ಚುವರಿ ಆದಾಯ ಬರುತ್ತಿದ್ದು, ಆ ಹಣವನ್ನು ಶಿಕ್ಷಣ, ಆರೋಗ್ಯ, ಉದ್ಯೋಗ ಹಾಗು ಬಡವರ ಮೂಲಸೌಲಭ್ಯಗಳಿಗೆ ಬಳಸಬೇಕು. ಡಯಾಲಿಸಿಸ್ ಸೇರಿ ದುಬಾರಿ ಚಿಕಿತ್ಸೆಗೆ ಆರ್ಥಿಕ ನೆರವು ನೀಡುವಂತೆ ಸರ್ಕಾರವನ್ನು ಆಗ್ರಹಿಸಿದರು.

ತಾಲ್ಲೂಕಿನಲ್ಲಿ 94 ಸಿ ಮತ್ತು 94 ಸಿಸಿ ಅಡಿಯಲ್ಲಿ ಹಕ್ಕುಪತ್ರ ವಿತರಣೆಯಲ್ಲಿ ವಿಳಂಬವಾಗಿರುವುದನ್ನು ಪ್ರಶ್ನಿಸಿದ ಅವರು, ಅರ್ಹ ಫಲಾನುಭವಿಗಳಿಗೆ ಶೀಘ್ರದಲ್ಲೇ ಹಕ್ಕುಪತ್ರ ವಿತರಿಸಬೇಕೆಂದು ಆಗ್ರಹಿಸಿದರು.

ಅಂಬೇಡ್ಕರ್ ಭವನ ನಿರ್ಮಾಣಕ್ಕೆ ತಮ್ಮ ಅವಧಿಯಲ್ಲಿ ಸರ್ಕಾರದಿಂದ ಕೋಟ್ಯಾಂತರ ರೂಪಾಯಿ ಅನುದಾನ ಒದಗಿಸಲಾಗಿದ್ದು, ಸಮಾಜದ ಸಹಕಾರದಿಂದ ಭವನ ನಿರ್ಮಾಣ ಸಾಧ್ಯವಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಚಂಚಲ ಕುಮಾರಸ್ವಾಮಿ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಯ ಸೋಲಿಗೆ ಪಕ್ಷದೊಳಗಿನ ಲೋಪ ಹಾಗು ಮಾಧ್ಯಮ, ಪ್ರಚಾರವನ್ನು ಸಮರ್ಪಕವಾಗಿ ಬಳಸಿಕೊಳ್ಳದಿರುವುದು ಕಾರಣ. ಮೂರು ವರ್ಷಗಳ ಬಳಿಕ ನಡೆಯುತ್ತಿರುವ ಸಭೆಗೆ ನಿರೀಕ್ಷೆಗೂ ಮೀರಿ ಕಾರ್ಯಕರ್ತರು ಭಾಗವಹಿಸಿರುವುದು ಪಕ್ಷಕ್ಕೆ ಹೊಸ ಚೈತನ್ಯ ತುಂಬಿದೆ ಎಂದು ಹೇಳಿದರು.

ಪುರಸಭೆ ಮಾಜಿ ಅಧ್ಯಕ್ಷ ಕಾಡಪ್ಪ ಮಾತನಾಡಿ, ಬೂತ್ ಮಟ್ಟದಲ್ಲಿ ತಂಡಗಳನ್ನು ರಚಿಸಿ ಮತದಾರರೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಪರಿಶಿಷ್ಟ ಜಾತಿ ಮತದಾರರನ್ನು ಮತ್ತಷ್ಟು ಸಂಘಟಿಸಿದರೆ 2028ರ ಚುನಾವಣೆಯಲ್ಲಿ ಜೆಡಿಎಸ್ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಹಿರಿಯ ಮುಖಂಡ ನಿರ್ವಾಣಯ್ಯ ಮಾತನಾಡಿ, ಕಾರ್ಯಕರ್ತರು ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕು.

ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ ಇಂದಿಗೂ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅಧಿಕಾರಿಗಳ ಮೂಲಕ ಕೆಲಸ ಮಾಡಿಸುತ್ತಿದ್ದಾರೆ. ಇದೇ ವಿಶ್ವಾಸವನ್ನು ಪಕ್ಷದ ಬಲವನ್ನಾಗಿ ರೂಪಿಸಬೇಕೆಂದರು.

ಸಭೆಯಲ್ಲಿ ಪಕ್ಷದ ಮುಖಂಡರಾದ ಧರ್ಮಣ್ಣ, ಗೋಪಾಲ ಹಾನುಬಾಳು, ದೊಡ್ಡನಹಳ್ಳಿ ಈರಯ್ಯ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ಮಂಜುಳ, ರುಕ್ಮಿಣಿ ಮಲ್ಲೇಶ್, ಶಿವಪ್ಪ ಮತ್ತಿತರರಿದ್ದರು.

# ನೈಸರ್ಗಿಕ ಕೃಷಿ ಸಂತ ಸಂತೆಶಿವರದ ಬಸವರಾಜಪ್ಪ

**– ಡಾ. ಬಿ.ಆರ್.ಅರುಣ್‌ಕುಮಾರ್,**
**ಕೃಷಿ ವಿಜ್ಞಾನ ಕೇಂದ್ರ, ಕಂದಲಿ**

ನೈಸರ್ಗಿಕ ಕೃಷಿ ಎಂಬುದು ಪ್ರಕೃತಿಯ ನಿಯಮಗಳನ್ನು ಅನುಸರಿಸಿ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯನ್ನು ಕಡಿಮೆ ಮಾಡಿ ನಡೆಸುವ ಪರಿಸರ ಸ್ನೇಹಿ ಕೃಷಿ ಪದ್ಧತಿಯಾಗಿದೆ. ಕಳೆದ ಕೆಲವು ದಶಕಗಳಿಂದ ಕೃಷಿಯಲ್ಲಿ ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಅತಿಯಾದ ಬಳಕೆಯಿಂದ ಮಣ್ಣಿನ ಫಲವತ್ತತೆ ಕುಸಿತ, ನೀರಿನ ಮಾಲಿನ್ಯ, ಜೀವವೈವಿಧ್ಯತೆ ಹಾನಿ ಹಾಗೂ ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಉಂಟಾಗಿವೆ.

ಈ ಸಮಸ್ಯೆಗಳಿಗೆ ಪರ್ಯಾಯವಾಗಿ ನೈಸರ್ಗಿಕ ಕೃಷಿಯು ಸುಸ್ಥಿರ, ಕಡಿಮೆ ವೆಚ್ಚದ ಮತ್ತು ಪರಿಸರ ಸ್ನೇಹಿ ಕೃಷಿ ಪದ್ಧತಿಯಾಗಿ ಹೊರಹೊಮ್ಮಿದೆ. ಈ ಕ್ಷೇತ್ರದಲ್ಲಿ ಸಂತೆಶಿವರದ ಬಸವರಾಜಪ್ಪ ಅವರು ತಮ್ಮ ಅನುಭವ ಮತ್ತು ಪ್ರಯೋಗಗಳ ಮೂಲಕ ರೈತರಿಗೆ ಪ್ರೇರಣೆಯಾಗಿರುವ ವ್ಯಕ್ತಿಯಾಗಿದ್ದಾರೆ. ಅವರು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಮಣ್ಣಿನ ಆರೋಗ್ಯವನ್ನು ಕಾಪಾಡುವ ಹಾಗೂ ಗುಣಮಟ್ಟದ ಬೆಳೆಗಳನ್ನು ಬೆಳೆಯುವ ವಿಧಾನಗಳನ್ನು ಯಶಸ್ವಿಯಾಗಿ ಅನುಸರಿಸಿದ್ದಾರೆ. ನೈಸರ್ಗಿಕ ಕೃಷಿಯ ಮಹತ್ವವನ್ನು ರೈತರಲ್ಲಿ ಜಾಗೃತಿಗೊಳಿಸುವಲ್ಲಿ ಅವರ ಕೊಡುಗೆ ಗಮನಾರ್ಹವಾಗಿದೆ.

ಅವರ ಕಾರ್ಯ ಮತ್ತು ಮಾರ್ಗದರ್ಶನದಿಂದ ಅನೇಕ ರೈತರು ರಾಸಾಯನಿಕ ಕೃಷಿಯಿಂದ ನೈಸರ್ಗಿಕ ಕೃಷಿಯತ್ತ ಮುಖಮಾಡಿ, ಪರಿಸರ ಸಂರಕ್ಷಣೆ ಮತ್ತು ಆರೋಗ್ಯಕರ ಆಹಾರ ಉತ್ಪಾದನೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಆದ್ದರಿಂದ ಸಂತೆಶಿವರದ ಬಸವರಾಜಪ್ಪ ಅವರು ನೈಸರ್ಗಿಕ ಕೃಷಿ ಕ್ಷೇತ್ರದಲ್ಲಿ ಮಾದರಿ ರೈತ ಹಾಗೂ ಮಾರ್ಗದರ್ಶಕರಾಗಿ ಗುರುತಿಸಿಕೊಂಡಿದ್ದಾರೆ.

ಸಂತೆಶಿವರದ ಶ್ರೀಯುತ ಬಸವರಾಜಪ್ಪನವರು ನೈಸರ್ಗಿಕ ಕೃಷಿಗೆ ಒತ್ತು ನೀಡುತ್ತಿದ್ದು, ತಮ್ಮ 6 ಎಕರೆ ಜಮೀನಿನಲ್ಲಿ ಯಾವುದೇ ರಾಸಾಯನಿಕ ಪದಾರ್ಥಗಳನ್ನು ಉಪಯೋಗಿಸದೆ ತೋಟಗಾರಿಕೆ ಬೆಳೆಗಳಾದ ತೆಂಗು, ಬಾಳೆ, ಮಾವು, ಬೆಣ್ಣೆಹಣ್ಣು, ಗೋಡಂಬಿ, ಚೆರ್ರಿ, ದಾಳಿಂಬೆ, ಹಲಸು, ಸಪೋಟ, ಮೂಸಂಬಿ, ಅಡಿಕೆ, ಕಾಳುಮೆಣಸು, ಬೆಳೆಗಳನ್ನು ಬೆಳೆದಿದ್ದಾರೆ. ಆಹಾರ ಬೆಳೆಗಳಾದ ರಾಗಿ, ಭತ್ತ, ಜೋಳ, ಸಾಸಿವೆ, ಹುರುಳಿ ಮತ್ತು ಅರಣ್ಯ ಬೆಳೆಗಳಾದ ತೇಗ, ಸಿಲ್ವರ್ ಓಕ್, ಹೊನ್ನೆ ಮತ್ತು ಇತರ ಕಾಡು ಜಾತಿಯ ಮರಗಳನ್ನು ಬೆಳೆಸಿದ್ದಾರೆ. ಇವರ ನೈಸರ್ಗಿಕ ಕೃಷಿ ತೋಟವು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿಯ ಸಂತೆಶಿವರ ಎಂಬ ಗ್ರಾಮದಲ್ಲಿ ಇದೆ.



### ಉಳುಮೆ ಬದಲು ಟ್ರಂಚ್

ಶ್ರೀಯುತರು ಕಳೆದ 30 ವರ್ಷದಿಂದ ಯಾವುದೇ ಉಳುಮೆಯನ್ನು (ಶೂನ್ಯ ಉಳುಮೆ) ಮಾಡದೆ ಬೆಳೆಗಳಿಗೆ ಬೇಕಾಗಿರುವ ಪೋಷಕಾಂಶಗಳನ್ನು ಮರಗಳ ಸಾಲುಗಳಲ್ಲಿ ಟ್ರಂಚ್‌ಗಳನ್ನು ತೆಗೆದು, ಅದರಲ್ಲಿ ಬೆಳೆಗಳ ಉಳಿಕೆಗಳು ಹಾಗೂ ತೆಂಗಿನ ಗರಿಗಳನ್ನು ಕತ್ತರಿಸಿ ಹಾಕಿ ಮುಚ್ಚುತ್ತಾರೆ. ಇದು ಕ್ರಮೇಣ ಗೊಬ್ಬರ ವಾಗಿ ಬೆಳೆಗಳು ಪೋಷಕಾಂಶಗಳನ್ನು ಹೀರಿಕೊಳ್ಳುತ್ತದೆ. ಇದರಿಂದ ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ ಎಂದು ತಿಳಿಸುತ್ತಾರೆ.

ಅಲ್ಲದೆ ಈ ಟ್ರಂಚ್‌ಗಳು ಇಂಗು ಗುಂಡಿಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದು, ನೀರಿನ ನಿರ್ವಹಣೆಯಲ್ಲಿಯೂ ಸಹಾಯಕವಾಗಿದೆ. ಯಾವುದೇ ರಾಸಾಯನಿಕ ಉಪಯೋಗಿಸಿಲ್ಲದಿರುವುದರಿಂದ ಭೂಮಿಯ ಫಲವತ್ತತೆ ಹೆಚ್ಚಾಗಿ ಎರೆಹುಳುಗಳು ಹೇರಳವಾಗಿ ತೋಟದ ತುಂಬ ಇದ್ದು, ತ್ಯಾಜ್ಯಗಳನ್ನು ವೇಗವಾಗಿ ಗೊಬ್ಬರವನ್ನಾಗಿಸುತ್ತವೆ ಎಂದು ಹೇಳುವುದರ ಜೊತೆಗೆ, ತೋಟದಲ್ಲಿ 30 ವರ್ಷಗಳಿಂದ ಫಲ ಬಿಡುತ್ತಿರುವ ಬಾಳೆಯನ್ನು ತೋರಿಸುತ್ತಾ, ಬಾಳೆಯಲ್ಲಿ ಕೂಳೆ ಬೆಳೆಯನ್ನು ಕತ್ತರಿಸದೆ ಅದರಲ್ಲಿಯೂ ಲಾಭವನ್ನು ಪಡೆಯಬಹುದು ಹಾಗೂ ಫಸಲಾದ ಬಾಳೆಯ ಮೇಲ್ಭಾಗವನ್ನು ಕತ್ತರಿಸುವುದರಿಂದ ಅದು ಕೊಳೆಯುವುದರಿಮದ ಬಾಳೆ ಗಿಡಕ್ಕೆ ಗೊಬ್ಬರವಾಗಿ ಪೋಷಕಾಂಶಗಳನ್ನು ಒದಗಿಸುತ್ತಿದೆ ಎಂಬುದಾಗಿ ತಿಳಿಸಿದರು.

### ಇಲಿಗಳ ನಿಯಂತ್ರಣಕ್ಕೆ ಗೂಬೆ ಬಳಕೆ

ಬಸವರಾಜಪ್ಪನವರು ಕೃಷಿಯ ಜೊತೆಗೆ ಪ್ರಕೃತಿಯ ಸಮತೋಲನವನ್ನು ಚೆನ್ನಾಗಿ ಅರಿತುಕೊಂಡು ಜಮೀನಿನಲ್ಲಿ ಸದಾ ಕಾಣಸಿಗುತ್ತಿದ್ದ ಗೂಬೆಗೆ ಪ್ರತಿದಿನ ಇಲಿಯನ್ನು ಆಹಾರವಾಗಿ ನೀಡುತ್ತಿದ್ದರು. ಇದರಿಂದ ಈಗ ಗೂಬೆಯ ಸಂತಾನೋತ್ಪತ್ತಿ ಮಾಡಿ, ಇವುಗಳು ತೋಟದಲ್ಲಿರುವ ಇಲಿಗಳನ್ನು ಹಾಗೂ ತೆಂಗಿನಲ್ಲಿರುವ ರೈನೋಸೆರೆಸ್ ಬೀಟಲ್‌ಗಳ ನಿರ್ವಹಣೆ ಮಾಡುತ್ತಿದ್ದು, ಇದೊಂದು ಅಪರೂಪದ ನಿರ್ವಹಣಾ ಪದ್ಧತಿಯಾಗಿದ್ದು, ಸುತ್ತಮುತ್ತಲಿನ ಜನರಿಗೆ ಆಶ್ಚರ್ಯದಾಯಕವಾಗಿ ಕಾಣುತ್ತಿದೆ ಎಂದು ಹೆಮ್ಮೆಯಿಂದ ತಿಳಿಸುತ್ತಾರೆ. ಇದಲ್ಲದೆ ಅವರು 2 ಜೇನುನೊಣದ ಡಬ್ಬಗಳನ್ನು ಇರಿಸಿ. ತುಡುವೆ ಜೇನನ್ನು ಸಾಕುವ ಮೂಲಕ ಪರಾಗಸ್ಪರ್ಶ ಹೆಚ್ಚಿಸಿ, ಅಧಿಕ ಇಳುವರಿ ಜೊತೆಗೆ ತಮ್ಮ ಕುಟುಂಬಕ್ಕೆ ಬೇಕಾದ ಜೇನುತುಪ್ಪವನ್ನು ಪಡೆಯುತ್ತಿದ್ದಾರೆ. ಈ ಎಲ್ಲಾ ಬೇಸಾಯ ಪದ್ಧತಿಗಳನ್ನು ನೋಡಿದರೆ ಶೂನ್ಯ ಬಂಡವಾಳ ಕೃಷಿಯಿಂದ ಹೆಚ್ಚಿನ ಆದಾಯ ಪಡೆಯಬಹುದು ಎಂಬ ಪರಿಕಲ್ಪನೆಗೆ ಸೂಕ್ತವಾದ ತೋಟವೆಂದು ಹೇಳಬಹುದು.

### 14 ಲಕ್ಷ ರೂ. ವಾರ್ಷಿಕ ಆದಾಯ

ಬಸವರಾಜಪ್ಪನವರು ಪ್ರತಿದಿನ ವೀಳ್ಯದೆಲೆಯನ್ನು ಮಾರಾಟ ಮಾಡಿ ಕನಿಷ್ಠ 150 ರೂಪಾಯಿ ಗಳನ್ನು ಗಳಿಸುತ್ತಿದ್ದು, ತಮ್ಮ ಜಮೀನಿನಲ್ಲಿ ಸಿಗುವ ಅಡಿಕೆ ಎಲೆಗಳಿಂದ ಅಡಿಕೆ ತಟ್ಟೆಗಳನ್ನು ತಯಾರಿಸಿ ಮಾರಾಟ ಮಾಡುವುದರ ಮೂಲಕ 4000 ರೂ. ಪಡೆಯುತ್ತಿದ್ದಾರೆ ಹಾಗೂ ಕಳೆದ 10 ವರ್ಷದಲ್ಲಿ ಬೃಹತ್ ಗಾತ್ರದ ತೇಗದ ಮರಗಳನ್ನು ಮಾರಾಟ ಮಾಡಿ 13 ಲಕ್ಷ ರೂ. ಆದಾಯವನ್ನು ಪಡೆದಿದ್ದಾರೆ. ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಸಿರು ಗೊಬ್ಬರವಾಗಿ ಹುರುಳಿಯನ್ನು ಬೆಳೆದು ತೋಟದ ಕಳೆ ಯನ್ನು ನಿಯಂತ್ರಣದಲ್ಲಿಟ್ಟಿರುವುದಲ್ಲದೆ, ತಮ್ಮ ತೋಟದ ನೈಸರ್ಗಿಕ ತೆಂಗಿನ ಕಾಯಿಗಳನ್ನು ಹೊರ ರಾಜ್ಯಗಳಿಗೂ ರಫ್ತು ಮಾಡುತ್ತಿದ್ದಾರೆ ಹಾಗೂ ಮೇವಿನ ಬೆಳೆಗಳಾದ ರೋಡ್ಸ್ ಹುಲ್ಲು, ಗಿನಿಹುಲ್ಲು ಬೆಳೆಯುತ್ತಿದ್ದಾರೆ ಮತ್ತು ಕೆಲವು ಅಪರೂಪದ ಸಸಿಗಳನ್ನು ಬೆಳೆಸಿ ಸುತ್ತಮುತ್ತಲಿನ ರೈತರಿಗೆ ಉಚಿತವಾಗಿ ನೀಡುತ್ತಿದ್ದು, ಈ ಎಲ್ಲಾ ಸಮಗ್ರ ಕೃಷಿ ಪದ್ಧತಿಯಿಂದಾಗಿ ಹೆಚ್ಚು ಖರ್ಚಿಲ್ಲದೆ 14 ಲಕ್ಷ ರೂ. ವಾರ್ಷಿಕ ಆದಾಯವನ್ನು ಪಡೆಯುತ್ತಿದ್ದಾರೆ. ತೆಂಗು ಹಾಗೂ ಇತರೆ ಕಾಡು ಜಾತಿ ಮರಗಳಿಗೆ ಕಾಳುಮೆಣಸು ಹಬ್ಬಿಸಿ ಬಯಲುಸೀಮೆಯಲ್ಲಿ ಕಾಳುಮೆಣಸು ಬೆಳೆದು ಸೈ ಎನಿಸಿಕೊಂಡಿದ್ದಾರೆ.

### ಅರಸಿ ಬಂದ ಹಲವು ಪ್ರಶಸ್ತಿಗಳು

ನೈಸರ್ಗಿಕ ಕೃಷಿ ಹಾಗೂ ಸಹಜ ಸಮಗ್ರ ಕೃಷಿಯಿಂದ ನೆಮ್ಮದಿ ಜೀವನ ಕಂಡುಕೊಂಡಿರುವ ಬಸವರಾಜಪ್ಪನವರಿಗೆ ಕೃಷಿಯಲ್ಲಿ ಅನುಸರಿಸಿದ ವಿಶಿಷ್ಠ ಹಾಗೂ ನೂತನ ಪದ್ಧತಿಗಳಿಗಾಗಿ ಅನೇಕ ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಅವು ಗಳಲ್ಲಿ ಪ್ರಮುಖವಾಗಿ 2000ನೇ ಇಸವಿಯಲ್ಲಿ ಫೆಐಊ ವತಿಯಿಂದ ಸೃಷ್ಟಿ ಪ್ರಶಸ್ತಿ, ದೆಹಲಿಯಲ್ಲಿ, 2001ರಲ್ಲಿ ನೀರು ನಿರ್ವಹಣೆ ಬಗ್ಗೆ ರಾಷ್ಟ್ರ ಪ್ರಶಸ್ತಿ ಹಾಗೂ ಕೃಷಿ ಪಂಡಿತ್ ಪ್ರಶಸ್ತಿಗಳು ಸಂದಿವೆ.

### 70ರ ವಯಸ್ಸಿನಲ್ಲೂ ಉತ್ಸುಕತೆ

ಬಸವರಾಜಪ್ಪನವರು ತಮ್ಮನ್ನು ತಾವು ನೈಸರ್ಗಿಕ ಕೃಷಿಯಲ್ಲಿ ತೊಡಗಿಸಿಕೊಳ್ಳುವುದಲ್ಲದೆ, ಬೇರೆ ರೈತರಿಗೆ ಮಾಹಿತಿಯನ್ನು ನೀಡಿ, ನೈಸರ್ಗಿಕ ಕೃಷಿ ಅಥವಾ ಸಮಗ್ರ ಕೃಷಿಯನ್ನು ಅಳವಡಿಸಿಕೊಳ್ಳಲು ಮಾರ್ಗ ದರ್ಶನವನ್ನು ನೀಡುತ್ತಿದ್ದಾರೆ. ನೈಸರ್ಗಿಕ ಕೃಷಿಯಲ್ಲಿ ಯಶಸ್ಸು ಕಂಡಿರುವ ಬಸವ ರಾಜಪ್ಪನವರು ಈ ಕಾಲಘಟ್ಟದ ಯುವ ರೈತರಿಗೆ ಮಾದರಿಯಾಗಿದ್ದು, ತಮ್ಮ ಎಪ್ಪತ್ತರ ವಯಸ್ಸಿನಲ್ಲೂ ಬಹಳ ಉತ್ಸುಕತೆಯಿಂದ ಕೃಷಿಯನ್ನು ಕೈಗೊಂಡು ಸಂತೋಷದಿಂದ ಜೀವನವನ್ನು ನಡೆಸುತ್ತಾ, ರಾಸಾಯನಿಕದಲ್ಲಿ ಮಾತ್ರವಲ್ಲ ನೈಸರ್ಗಿಕ ಕೃಷಿಯಲ್ಲಿಯೂ ಲಾಭ ಅಡಗಿದೆ ಎಂಬುದನ್ನು ಎಲ್ಲೆಡೆ ಪಸರಿಸುತ್ತಿದ್ದಾರೆ. ಇವರ ನೈಸರ್ಗಿಕ ಕೃಷಿ ತಾಕಿಗೆ ವರ್ಷವಿಡಿ ರಾಜ್ಯ, ಹೊರರಾಜ್ಯದ ರೈತರು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ರಾಜ್ಯ ಮತ್ತು ರಾಷ್ಟ್ರಮಟ್ಟದ ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳು ಭೇಟಿ ನೀಡುತ್ತಾ ವಿಚಾರ ವಿನಿಮಯ ನಡೆಸುತ್ತಿರುತ್ತಾರೆ. ತಮ್ಮ ನೈಸರ್ಗಿಕ ಕೃಷಿಯ 30 ವರ್ಷದ ಅನುಭವವನ್ನು ತಮ್ಮ ಸಹಜ ಕೃಷಿ ಹೆಜ್ಜೆ ಗುರುತು ಎಂಬ 156 ಪುಟಗಳ ಪುಸ್ತಕವನ್ನು ಬರೆದು ಇತರೆ ರೈತರಿಗೆ ಮಾದರಿಯಾಗಿದ್ದಾರೆ.ಇವರು ಕೃಷಿ ವಿಜ್ಞಾನ ಕೇಂದ್ರ, ಕಂದಲಿ, ಹಾಸನದ ವಿಜ್ಞಾನಿಗಳ ಜೊತೆಗೂಡಿ ಕಳೆದ ಮೂವತ್ತು ವರ್ಷದಿಂದ ಸಾವಯವ ಕೃಷಿ ಮತ್ತು ಸಮಗ್ರ ಕೃಷಿಯನ್ನು ಜಿಲ್ಲೆಯ ರೈತರಿಗೆ ಪರಿಚಯಿಸುವುದರಲ್ಲಿ ಹೆಚ್ಚಿನ ಪಾತ್ರ ವಹಿಸಿದ್ದಾರೆ.

# ಲಲಿತಾ – 9



**ಧನಂಜಯ ಜೀವಾಳ ಬಿ.ಕೆ.**

ಕಾಲೇಜಿನಲಿ ಮೊದಲ ವರ್ಷ ಕಳೆದು ಹೋಗಿದ್ದೇ ತಿಳಿಯಲಿಲ್ಲ. ಪತ್ರ, ಹಬ್ಬದೂಟ, ಮುನಿಸು, ಭೇಟಿ, ಕೊನೆಯೇ ಇಲ್ಲದ ಫೋನ್ ಕಾಲು, ಜಗಳ, ಲೈಟಾಗಿ ಜಿಗುಟಿದ್ದು, ಸಂಧಾನ, ಬೈಕಿನ ಕೀ ಕದ್ದಿಟ್ಟು ಕಾಡಿದ್ದು, ಮುಸಿಮುಸಿ ಅಳು, ಸ್ವೀಟು, ಮಧ್ಯಸ್ಥಿಕೆ, ಗಿಫ್ಟು, ಕಾರಣವೇ ಇಲ್ಲದ ಫೋನ್ ಕಾಲು, ಕಾರ್ಡು, ಆರೋಪ, ಸಿಲ್ಲಿಸಿಲ್ಲಿ ಕಾರಣಕ್ಕೆ ಟೆಲಿಗ್ರಾಮು, ಬೆಚ್ಚಗಿನ ಹಸ್ತಲಾಘವ, ಬರೇ, ಮಾತಿನ ನಡುವೆಯೇ ವಿನಾಕಾರಣ ಫೋನ್ ಕಟ್ಟು, ಸಿಟ್ಟು, ಅಷ್ಟು ಬೇಗ ಫೋನಿಟ್ಟಿದ್ದು ಯಾಕೆಂಬ ವಾಗ್ವಾದ, ಈಗಲೇ ಬರಬೇಕೆಂಬ ಆರ್ಡರು, ಸೆಡವು, ನಾನು ಮೊದಲು ಫೋನಿಡಲ್ಲ, ಬೇಕಿದ್ದರೆ ನೀವೇ ಮೊದಲು ಕಟ್ ಮಾಡಿ ಎಂಬ ತಾಕೀತು, ಕ್ಷಮೆ, ಜಗಿದು ಕೊಟ್ಟ ಚ್ಯೂಯಿಂಗ್ ಗಮ್ಮು, ಭಾವನಾತ್ಮಕ ಬ್ಲಾಕ್ ಮೈಯ್ಲು, ಚೀಟಿ, ಮೆಲ್ಲುಸಿರಿನ ಪಿಸುಮಾತು, ಊಟ, ಕಚ್ಚಿಕೊಟ್ಟ ಸೀಬೇಕಾಯಿ, ಫೋನ್ ಮಾಡಿ ಟೀವಿಯಲ್ಲಿ ಬರುವ ರೊಮ್ಯಾಂಟಿಕ್ ಹಾಡಿಗೆ ರಿಸೀವರನ್ನು ಇಟ್ಟು ಕೇಳಿಸುವುದರಿಂದ ಹಿಡಿದು ಮೇಷ್ಟ್ರು ಹೊಡೆದ ಆಟದ ಚೆಂಡು ಆಕೆಯ ಮನೆಯ ಕಾಂಪೌಂಡಿನೊಳಗೆ ಬಿದ್ದರೆ, ಹೊಡೆದವರಾರೋ ಅವರೇ ಬಂದು ಇಸ್ಕೊಂಡ್ಹೋಗಲು ಹೇಳು ಅನ್ನುವವರೆಗೂ ಚೆಲ್ಲಾಟಗಳು ಯಾರ ಹಂಗಿಲ್ಲದೆಯೇ ನಡೆದವು.

ಈ ನಡುವೆ ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಚುನಾವಣೆಗಳು ಘೋಷಣೆಯಾದವು. ಸ್ಪರ್ಧಿಗಳು ಹಾಗೂ ಅವರ ಬೆಂಬಲಿಗರಿಗೆ ವಾರ್ಷಿಕ ಮನರಂಜನಾ ಉತ್ಸವದಂತೆ ಬರುತಿದ್ದ ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ, ವಿಧಾನಸಭೆ, ವಿಧಾನ ಪರಿಷತ್, ಲೋಕಸಭೆ ಚುನಾವಣೆಗಳು ಈ ಶಿಕ್ಷಕ ವೃಂದವನ್ನು ಇನ್ನಿಲ್ಲದ ಇಕ್ಕಟ್ಟಿಗೆ ಸಿಲುಕಿಸುತಿದ್ದವು.

ಚುನಾವಣಾ ಸಿದ್ಧತೆಗಾಗಿ ತರಬೇತಿಗಾಗಿ ಬಹುತೇಕ ಶಿಕ್ಷಕರನ್ನು ನಿಯೋಜಿಸಲಾಯ್ತು. ತಾಲ್ಲೂಕಿನ ನೂರಾರು ಶಿಕ್ಷಕರುಗಳು ಶಿಕ್ಷಣೇತರ ಕಾರಣಕ್ಕಾಗಿ ತಮ್ಮ ತಮ್ಮ ಕಾರ್ಯಕ್ಷೇತ್ರದ ಊರುಗಳ ಹೊರಗೆ ಒಬ್ಬರನ್ನೊಬ್ಬರು ಭೇಟಿಯಾಗುವ ಅವಕಾಶ ವರ್ಷಕ್ಕೊಮ್ಮೆಯಾದರೂ ಸಿಗುತ್ತಿತ್ತು. ಇಂತಹ ಸಂದರ್ಭಗಳು ಗಿರೀಶ್ಮೇಷ್ಟ್ರ ಸ್ನೇಹಿತರ ಬಳಗದ ಪಾಲಾಕ್ಷ, ಲೀಲಾ, ಮೋಹನ ರಾಜು, ಮಮತಾ, ನಾಗರಾಜು, ಶೈಲಜಾ, ಶ್ರೀನಿವಾಸ, ದಿಲ್ನಾರ್, ರೂಪಾ ಮುಂತಾದವರಿಗೆ ಹತ್ತಾರು ಸಮಾಜಮುಖಿ ವಿಚಾರಗಳನ್ನು ಚರ್ಚಿಸಲು ವೇದಿಕೆಯೊದಗಿಸುತಿತ್ತು.

ಶ್ರೀನಿವಾಸ್, ಸರ್ಕಾರ ಇಷ್ಟೆಲ್ಲಾ ಶ್ರಮ ತಗೊಂಡು ಚುನಾವಣೆ ಮಾಡುತಿದ್ದರೂ ಓಟು ಹಾಕಲಿಕ್ಕೆ ಬರೋರು ಎಷ್ಟ್ ಜನಾ ಗೊತ್ತುಂಟಾ? ಬಜೆಟ್ಟಿನ ಬಹುಪಾಲನ್ನು ಬಳಸಿ ಅನುಭವಿಸುವ ನಗರಗಳ ಜನತೆ ಚುನಾವಣೆಯಲ್ಲಿ ಮಾತ್ರ ಸೋಂಬೇರಿಗಳು. ರಸ್ತೆ, ವಿದ್ಯುತ್, ನೀರು ಸರಬರಾಜು, ಫ್ಲೈಓವರ್, ಸಾರಿಗೆ ವ್ಯವಸ್ಥೆ, ವಿದ್ಯಾಸಂಸ್ಥೆಗಳು, ವಿಮಾನ ನಿಲ್ದಾಣ, ಕೈಗಾರಿಕೆಗಳು ಮುಂತಾದವುಗಳ ನೆಪದಲ್ಲಿ ಸಾವಿರಾರು ಕೋಟಿಗಳನ್ನು ಅನುಭವಿಸುವ ಬೃಹತ್ ಪಟ್ಟಣಗಳ ಜನತೆ ಚುನಾವಣೆಯ ದಿನ ಗೊರಕೆ ಹೊಡೆಯುವುದು ವಿಪರ್ಯಾಸ.

ರೂಪ, ಸಾರ್ವಜನಿಕ ಸಂಗತಿಗಳಿಗೆ ಸಂಬಂಧಿಸಿ ತಾವೇ ಅಂತಿಮವೆಂಬಂತೆ ಅಧಿಕಾರವಾಣಿಯಿಂದ ತೀರ್ಪು ನೀಡಿ, ಫರ್ಮಾನು ಹೊರಡಿಸುವ, ಸವಲತ್ತುಗಳನ್ನು ಹಕ್ಕುಗಳೆಂಬಂತೆ ಅನುಭವಿಸುವ ಇವರು ಮತದಾನದಂಥ ಕರ್ತವ್ಯವನ್ನು ಮರೆಯುವುದು ಎಷ್ಟು ಸರಿ? ವಿಧಾನಸಭೆ ಅಥವಾ ಸಂಸದೀಯ ಕ್ಷೇತ್ರಗಳಿಗೆ ನೀಡುವ ಅನುದಾನವನ್ನು ಆ ಕ್ಷೇತ್ರದಲ್ಲಿ ಮತದಾನ ಶೇಕಡಾ ಎಪ್ಪತ್ತಕ್ಕಿಂತ ಹೆಚ್ಚಾದಲ್ಲಿ ಮಾತ್ರ ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡಬೇಕು. ನಂತರದ ಪ್ರತೀ ಶೇಕಡಾ ಐದು ಕಡಿಮೆ ಮತದಾನಕ್ಕೆ ಶೇಕಡಾ ಹತ್ತರಷ್ಟು ಅನುದಾನವನ್ನು ಕಡಿಮೆ ಮಾಡುವುದು ಅತ್ಯಗತ್ಯ.

ಕ್ಷೇತ್ರದಲ್ಲಿ ಎಷ್ಟೇ ಅಭ್ಯರ್ಥಿಗಳು ಸ್ಪರ್ಧಿಸಿದ್ದರೂ ಒಟ್ಟು ಶೇಕಡಾ ಎಪ್ಪತ್ತರಷ್ಟು ಮತದಾನವಾದಲ್ಲಿ ಮಾತ್ರ ಚುನಾವಣೆ ಸಿಂಧುವಾಗಬೇಕು. ಚಲಾವಣೆಯಾದ ಮತಗಳಲ್ಲಿ ಕನಿಷ್ಠ ನಲವತ್ತು ಮತ ಪಡೆದಲ್ಲಿ ಮಾತ್ರ ವಿಜಯಶಾಲಿಯ ಗೆಲುವನ್ನು ಸಿಂಧುಗೊಳಿಸಬೇಕು. ನಕಾರಾತ್ಮಕ ಮತಗಳ ಸಂಖ್ಯೆಯು ಚಲಾವಣೆಯಾದ ಮತಗಳ ಶೇಕಡಾ ಇಪ್ಪತ್ತೈದು ಮೀರಿದಲ್ಲಿ ಮರುಚುನಾವಣೆ ನಡೆಸಬೇಕು.

ಪಾಲಾಕ್ಷ ಮೇಷ್ಟ್ರು, ಲೋಕಸಭೆಗೇ ಇರಬಹುದು, ವಿಧಾನಸಭೆಗೇ ಇರಬಹುದು ಅಥವಾ ಸ್ಥಳೀಯ ಸಂಸ್ಥೆಗಳಿರಬಹುದು ಸತತವಾಗಿ ಮೂರು ಚುನಾವಣೆಗಳಲ್ಲಿ ಮತ ಚಲಾವಣೆ ಮಾಡದಿದ್ದಲ್ಲಿ ಸಂಬಂಧಿತ ಕ್ಷೇತ್ರದಿಂದ ಸದರಿ ಮತದಾರನ ಹೆಸರನ್ನು ಅಮಾನತ್ತುಗೊಳಿಸಬೇಕು. ಪಡಿತರ ವ್ಯವಸ್ಥೆ, ವಾಹನ ನೋಂದಣಿ, ಗೃಹನಿರ್ಮಾಣ ಪರವಾನಿಗೆ, ಕುಟುಂಬದ ಸದಸ್ಯರಿಗೆ ವಿದೇಶ ಪ್ರಯಾಣಕ್ಕೆ ಅನುಮತಿ, ಸಾಲಸೌಲಭ್ಯ ಇನ್ನಿತರ ಯಾವುದೇ ಅನುಕೂಲಗಳನ್ನು ನೀಡಬಾರದು.

ಪ್ರತೀ ಚುನಾವಣೆಗೆ ಕನಿಷ್ಠ ಒಂದು ತಿಂಗಳಿಗೆ ಮುಂಚೆ ಮತದಾರರ ಪಟ್ಟಿಯನ್ನು ಸ್ಥಳೀಯ ಆಡಳಿತದ ಸಹಾಯದಿಂದ ಸೇರ್ಪಡೆ ಹಾಗೂ ಕೈಬಿಡುವಿಕೆಯಿಂದ ಪರಿಷ್ಕರಿಸಬೇಕು. ಅಲ್ಲದೇ ಹದಿನೈದು ದಿನ ಮುಂಚೆ ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಬೇಕು. ಮತದಾರರು ಮತ್ತೆಲ್ಲೂ ಓಟು ಹಾಕದಂತೆ, ಇಡೀ ದೇಶಕ್ಕೆ ಓರ್ವ ವ್ಯಕ್ತಿಗೆ ಒಂದೇ ಗುರುತಿನ ಪತ್ರ ಇರುವಂತಹ ವ್ಯವಸ್ಥೆಯೊಂದನ್ನು ತಂದು ಆ ಗುರುತಿನ ಚೀಟಿಯನ್ನಲ್ಲದೇ ಬೇರಾವುದೇ ಗುರುತನ್ನು ಮತದಾನಕ್ಕೆ ಬಳಸಲು ಅನುಮತಿಸಬಾರದು.

ಚುನಾವಣೆಗೆ ಮುಂಚೆ ಹೇಗೆ ಚುನಾವಣಾ ಆಯೋಗವು ಪ್ರತೀ ಅಭ್ಯರ್ಥಿಯ ಚಲನವಲನ, ಖರ್ಚುವೆಚ್ಚಗಳ ಮೇಲೆ ನಿಗಾ ಇಟ್ಟಿರುತ್ತದೆಯೋ ಹಾಗೆಯೇ ಚುನಾಯಿತ ಪ್ರತಿನಿಧಿಯ ಕಾರ್ಯವೈಖರಿ, ಆಸ್ತಿಪಾಸ್ತಿ, ನಿಷ್ಪಕ್ಷಪಾತ ಕೆಲಸದ ಮೇಲೆ ಗಮನವಿರಿಸಿ ವರ್ಷಕ್ಕೊಮ್ಮೆ ಸಾರ್ವಜನಿಕರಿಗೆ ನೈಜಚಿತ್ರಣವನ್ನು ಜಾಹೀರುಗೊಳಿಸಬೇಕು. ಈ ಕೆಲಸಕ್ಕೆ ಐಎಎಸ್ ಅಥವಾ ಕೆಎಎಸ್ ಅಧಿಕಾರಿಯ ನೇತೃತ್ವದ ತಂಡವೊಂದನ್ನು ರಚಿಸಿ ಸ್ವಯಂಪ್ರೇರಣೆಯಿಂದ ಮತದಾರರಿಗೆ ಪತ್ರಿಕೆಗಳ ಮೂಲಕ ವಿವರಗಳನ್ನು ನೀಡಬೇಕು. ಪಕ್ಷೇತರರು ಪಕ್ಷೇತರರಾಗೇ ಸೇವೆ ಸಲ್ಲಿಸಲು ಆಗ್ರಹಿಸಿ ಕುದುರೆ ವ್ಯಾಪಾರ ತಪ್ಪಿಸಬೇಕು. ಚುನಾವಣಾ ನಂತರದ ಅಧಿಕಾರ ಅನುಭವಿಸುವುದಕ್ಕಾಗಿ ಬಹುಮತ ಪಡೆದ ಪಕ್ಷವನ್ನು ಬೆಂಬಲಿಸುವುದು ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ.

**ಗ್ರಾಮಾಯಣ 41**

ರೂಪಾ, ಎಂತಾ ಮಾರಾಯ್ರೇ ಇದು, ವರ್ಷಕ್ಕೊಂದು ಚುನಾವಣೆ. ಅದು ಸ್ಥಳೀಯ ಸಂಸ್ಥೆಗಳಿಗಿರಬಹುದು, ತಾಲ್ಲೂಕು ಪಂಚಾಯ್ತಿಯಾಗಿರಬಹುದು, ಜಿಲ್ಲಾ ಪಂಚಾಯ್ತಿಯದಿರಬಹುದು, ವಿಧಾನಸಭೆ, ವಿಧಾನ ಪರಿಷತ್, ಲೋಕಸಭೆ, ರಾಜ್ಯಸಭೆ, ರಾಷ್ಟ್ರಪತಿ ಚುನಾವಣೆ, ಉಪಚುನಾವಣೆಗಳು....... ಏನಿದು ಒಂಡೇ ಮ್ಯಾಚುಗಳಂತಾಗಿ ಹೋಯ್ತಲ್ಲ ಈ ಪ್ರಜಾಪ್ರಭುತ್ವದ ಅವಸ್ಥೆ?

ಆಡಳಿತ ವ್ಯವಸ್ಥೆ ಪ್ರತಿಯೊಂದು ಚುನಾವಣೆಗೂ ಕನಿಷ್ಠ ನಾಲ್ಕು ತಿಂಗಳು ತನ್ನ ಅಗತ್ಯ ಕಾರ್ಯಬಾರವನ್ನು ಪಕ್ಕಕ್ಕಿರಿಸಿ, ಬರೀ ಚುನಾವಣಾ ಕೆಲಸಗಳಿಗೆ ಮೀಸಲಾಗಿಡುತ್ತದೆ. ಸಾರ್ವಜನಿಕ ಕೆಲಸಗಳಿಗೆ ಮತ್ತು ಅಗತ್ಯಗಳಿಗೆ ದುಡಿಯಬೇಕಾದ ಆಡಳಿತ ಯಂತ್ರ ಈ ಎಲೆಕ್ಷನ್ನಾಟದ ಆಟಿಕೆಗಳಾಗಿ ಹೋಗಿದ್ದಾರೆ. ಇನ್ನು ಜನರ ಕೆಲಸ ಮಾಡುತ್ತೇವೆಂದು ಆಯ್ಕೆಯಾಗಿ ಹೋದವರು ಒಂದಲ್ಲ ಒಂದು ಚುನಾವಣಾ ಆಟದಲ್ಲಿ ಮಗ್ನರಾಗಿರುತ್ತಾರೆ. ಇವೆಲ್ಲದರ ನಡುವೆ ಗುಂಪುಗಾರಿಕೆ, ಪಕ್ಷಾಂತರ, ಸರ್ಕಾರ ಬೀಳಿಸೋದು, ಆಡಳಿತವನ್ನು ಏಳಿಸೋದು, ವರ್ಗಾವರ್ಗಿ, ಐಟೀ ದಾಳಿ, ಗುತ್ತಿಗೆ ಧೂಳಿ, ಅಡಿಗಲ್ಲು, ಉದ್ಘಾಟನೆ, ಸನ್ಮಾನ, ಗಧೆ, ಹಾರ, ನಮ್ಮದನ್ನು ಬಿಚ್ಚಿದರೆ ನಿಮ್ಮದ್ನ ಬಿಚ್ತೇವಿ ಎಂಬ ಬೆದರಿಕೆ ಮತ್ತು ಬ್ಲಾಕ್ಮೇಯ್ಲ್‌ನಲ್ಲಿ ಕಾಲ ಕಳೀತಾರೆ. ರಾಜ್ಯಸಭೆ, ವಿಧಾನ ಪರಿಷತ್ ಮತ್ತು ರಾಷ್ಟ್ರಪತಿ ಚುನಾವಣೆಯನ್ನು ಹೊರತು ಪಡಿಸಿ ಉಳಿದೆಲ್ಲಾ ಚುನಾವಣೆಗಳು ಏಕಕಾಲದಲ್ಲಿ ನಡೆಯುವಂತೆ ಭಾರತದ ಚುನಾವಣಾ ಆಯೋಗ ಕ್ರಮಕೈಗೊಳ್ಳಬೇಕು. ಯಾವನೇ ವ್ಯಕ್ತಿ ಯಾವುದಾದರೂ ಒಂದೇ ಪ್ರಾತಿನಿಧ್ಯಕ್ಕೆ ಅಭ್ಯರ್ಥಿಯಾಗಲು ಮಾತ್ರ ಸಾಧ್ಯವಾಗಲಿದೆ ಇದರಿಂದ. ಲೋಕಸಭೆಗೂ ಅವನೇ, ವಿಧಾನಸಭೆಗೂ ಅವನೇ, ಜಿಲ್ಲಾ ಪಂಚಾಯ್ತಿಗೂ ಅವನೇ, ತಾಲ್ಲೂಕು ಪಂಚಾಯ್ತಿಗೂ ಅವನೇ, ಇಲ್ಲೆಲ್ಲೂ ಗಿಟ್ಟದಿದ್ದರೆ ಗ್ರಾಮಪಂಚಾಯ್ತಿಗೂ ಇವನೇ. ಇವನಲ್ಲದಿದ್ದರೆ, ಆತನ ಹೆಂಡತಿಯೋ, ಮಗನೋ, ಮಗಳೋ, ಸೊಸೆಯೋ ಇಲ್ಲಾ ಮೊಮ್ಮಗನೋ; ಇದೆಲ್ಲಾ ನಿಲ್ಲಬೇಕು ಅಂದ್ರೆ, ಎಲ್ಲಾ ಬಗೆಯ ಚುನಾವಣೆಗಳು ಒಮ್ಮೆಲೆ, ಒಂದೇ ಮತದಾನದ ದಿನವೇ ನಡೆಯಬೇಕು. ಇದರಿಂದ ಸಮಯ, ಶ್ರಮ ಮತ್ತು ಸಂಪನ್ಮೂಲಗಳ ಸದುಪಯೋಗ ಆಗುತ್ತದೆ ಮತ್ತು ಆಯ್ಕೆಯಾದವರಿಗೆ ಕೆಲಸ ಮಾಡಲು ಅವಕಾಶ ದೊರೆಯುತ್ತದೆ.

ಮೋಹನ್ರಾಜು, ಈ ಚುನಾವಣೆಯಲ್ಲಿ ಪಕ್ಷಗಳಾಗಲೀ, ಅಭ್ಯರ್ಥಿಗಳಾಗಲೀ ವಿಷಯಾಧಾರಿತವಾಗಿ ಯಾರೂ ತಮ್ಮ ಬದ್ಧತೆಯನ್ನು, ಉದ್ದೇಶವನ್ನು, ಸಂಕಲ್ಪವನ್ನು ಪ್ರತಿಪಾದಿಸುತ್ತಲೇ ಇಲ್ಲ. ಇನ್ನೊಬ್ಬರ ಹುಳುಕು, ವೈಫಲ್ಯ, ಭ್ರಷ್ಟಾಚಾರ ಇವುಗಳನ್ನೇ ಹೇಳ್ತಿದ್ದಾರೆ ಬಿಟ್ರೆ, ತಾವು ಸ್ಪರ್ಧಿಸಿರುವುದು ಯಾವ ಪುರುಷಾರ್ಥಕ್ಕೆ ಎಂದು ಎಲ್ಲೂ ಯಾರೂ ಬಾಯ್ಬಿಡುತ್ತಿಲ್ಲ. ಇವರಿಗೇ ಯಾಕೆ ನಾವು ಮತ ನೀಡಬೇಕೆಂಬ ಸಮರ್ಥನೆ ಸಹಾ ಇಲ್ಲ. ಇದನ್ನು ಒಪ್ಪುವುದು ಸ್ವಲ್ಪ ಕಷ್ಟ. ಪೂರ್ಣ ಬಹುಮತ ಪಡೆದ ಪಕ್ಷ ಆಡಳಿತ ನಡೆಸುವಾಗ ವಿರೋಧ ಪಕ್ಷದವರಿಗಿಂತಲೂ ಮಿಗಿಲಾಗಿ ಒಳಗಿದ್ದುಕೊಂಡೇ ಕಾಲೆಳೆಯುವ, ಪಿತೂರಿ ಮಾಡುವ, ಗುಂಪುಗಾರಿಕೆಯಲ್ಲೇ ಮುಳುಗಿ ಭಿನ್ನಮತಿಯರಾಗಿ ಅಧಿಕಾರ ಪಡೆಯುವ ಮೇಲಾಟದಲ್ಲಿಯೇ ಐದು ವರ್ಷ ತಳ್ಳುವ, ತಳ್ಳಿದ ದಿನಗಳನ್ನು ನೋಡಿದ್ದೇವೆ. ಪ್ರಣಾಳಿಕೆಗಳು ಕಾರ್ಯಗತವಾಗುವ ನಾಳೆಗಳನ್ನು ಬರಗೆಟ್ಟವರಂತೆ ಹತಾಶೆಯಿಂದ ನೋಡುವುದು ನಮಗೆ ತಪ್ಪುವುದೇ?

ರೂಪಾ ಮೇಡಂ, ಈಗಾಗಲೇ ಯಾವುದೋ ಒಂದು ಖಾತೆಗೆ ಮಂತ್ರಿಯಾದವರಿಗೆ ಮತ್ಯಾಕೆ ಈ ಉಸ್ತುವಾರಿ ಹುದ್ದೆ? ಆಯಾ ಜಿಲ್ಲೆಯಿಂದ ಚುನಾಯಿತರಾದ ಹಿರಿಯ ಶಾಸಕರಿಗೆ ಜವಾಬ್ದಾರಿ ನೀಡುವುದು ಸಮಂಜಸವಲ್ಲವೇ? ಎರಡೂ ಹುದ್ದೆಯಿಂದ ಕೆಲಸದ ಒತ್ತಡ ಹೆಚ್ಚಾಗಿ ಯಾವುದೂ ಕಾರ್ಯಗತವಾಗದಿರುವ ಸಾಧ್ಯತೆಯೇ ಜಾಸ್ತಿಯಾಗುವುದಿಲ್ವೇ? ನೀಡುವ ಅಥವಾ ಪಡೆಯುವ ಅಧಿಕಾರ ಜನರಿಗೂ ಉಪಯೋಗವಾಗಬೇಕಲ್ವೇ?

ಎರಡು ಕ್ಷೇತ್ರದಲ್ಲಿ ಸ್ಪರ್ಧಿಸಬಾರದು. ಈಗಾಗಲೇ ಯಾವುದೇ ಶಾಸಕಾಂಗದ ಸದಸ್ಯನಾಗಿದ್ದರೆ, ಆ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರವೇ ಅಭ್ಯರ್ಥಿಯಾಗಬೇಕು.

ಒಬ್ಬ ವ್ಯಕ್ತಿ ಒಂದೇ ಕಡೆ ಮತದಾರನಾಗಲು ಸಾಧ್ಯವಿರುವುದರಿಂದ, ಆಯಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರಿದ್ದರೆ ಮಾತ್ರ ಆ ವ್ಯಕ್ತಿ ಉಮೇದುವಾರನಾಗಬಲ್ಲ. ರಾಜೀನಾಮೆ ನೀಡಿದ ಸ್ಥಾನವನ್ನು ಭರ್ತಿ ಮಾಡಲು ನಡೆಯುವ ಚುನಾವಣೆಯ ವೆಚ್ಚವನ್ನು ರಾಜೀನಾಮೆ ನೀಡಿದವರೇ ಭರಿಸಬೇಕು.

ಚುನಾವಣೆಯಲ್ಲಿ ಆಯಾ ಕ್ಷೇತ್ರದ ಮತಸಂಖ್ಯೆಯ ಕನಿಷ್ಠ ತೊಂಬತ್ತು ಮತದಾನವಾಗಲೇಬೇಕು. ಚಲಾವಣೆಯಾದ ಮತಗಳಲ್ಲಿ ಕನಿಷ್ಠ ಶೇಕಡಾ ಮೂವತ್ತೈದು ಮತಗಳನ್ನು ಪಡೆದವರನ್ನು ಮಾತ್ರ ಆ ಕ್ಷೇತ್ರದ ಪ್ರತಿನಿಧಿ ಎಂದು ಪರಿಗಣಿಸಬೇಕು.

ಎಲ್ಲಾ ಮನರಂಜನೆಯ ತಾಣಗಳನ್ನು, ಪ್ರೇಕ್ಷಣೀಯ ಸ್ಥಳಗಳನ್ನು ಮತ್ತು ಹೋಂಸ್ಟೇಗಳನ್ನು ಚುನಾವಣೆಯ ದಿನಗಳಲ್ಲಿ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿ ಕಡ್ಡಾಯವಾಗಿ ಬಂದ್ ಮಾಡಿಸಬೇಕು. ಇಲ್ಲವಾದಲ್ಲಿ ಚುನಾವಣಾ ರಜೆ ಪಿಕ್ನಿಕ್ ಮಜೆಗಾಗಿ ಬಳಕೆಯಾಗಲಿದೆ.

ಆಯಾ ಜಿಲ್ಲಾಡಳಿತ ಈ ಕುರಿತು ಖಡಕ್ಕಾದ, ಖಚಿತವಾದ ಮತ್ತು ಸ್ಪಷ್ಟವಾದ ಕ್ರಮ ಕೈಗೊಳ್ಳಬೇಕುಟಿಟಿ.

ಮಮತಾ, ಓಟಿಗೆ ನೋಂದಣಿ ಮಾಡಿಕೊಳ್ಳಿ ಎನ್ನುವುದು, ನಂತರ ಓಟಿನ ಪ್ರಮಾಣ ಕಡಿಮೆಯಾಗಿದೆ ಎಂದು ಗೋಳಾಡುವುದು ಮಾಡುವ ಬದಲು, ಆ ದಿನ ಮತದಾನದ ಸಮಯದಲ್ಲಿ ಟೀವಿ, ಚಿತ್ರಮಂದಿರ ಮುಂತಾದ ಮನರಂಜನಾ ಸಾಧನಗಳನ್ನು ಬಂದ್ ಮಾಡಲಿ. ಹಾಗೆಯೇ ನಿರಂತರ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಮತ ಚಲಾಯಿಸದವರಿಗೆ ನೀಡಿರುವ ಅಡುಗೆ ಅನಿಲ, ಡ್ರೈವಿಂಗ್ ಲೈಸೆನ್ಸ್ , ದೂರವಾಣಿ ಸೌಲಭ್ಯ, ವಿದ್ಯುತ್ ಸೌಲಭ್ಯ, ವಿದೇಶೀ ಪ್ರಯಾಣ, ಸಾಲ ಸೌಲಭ್ಯ, ಸಬ್ಸಿಡಿ ಸೌಲಭ್ಯ ಮುಂತಾದುವನ್ನು ಹಂತಹಂತವಾಗಿ ಹಿಂಪಡೆಯಬೇಕು. ದೇಶದ ಹಿತಚಿಂತನೆ ಮಾಡದವರಿಗೆ ಪುಗಸಟ್ಟೆ ಹಾಗೂ ರಿಯಾಯಿತಿಯ ಸವಲತ್ತುಗಳನ್ನು ಯಾಕೆ ನೀಡಬೇಕು? ಕನಿಷ್ಠ ಎಂಬತ್ತು ಶೇಕಡಾ ಮತದಾನವಾಗದಿದ್ದರೆ, ಚುನಾವಣಾ ಪ್ರಕ್ರಿಯೆಯನ್ನು ಎಂಬತ್ತು ಶೇಕಡಾ ಆಗುವವರೆಗೆ ಮತದಾನ ಪೂರ್ಣಗೊಂಡಿದೆ ಎಂದು ಘೋಷಿಸಬಾರದು. ಚಲಾವಣೆಗೊಂಡ ಆ ಕನಿಷ್ಠ ಎಂಬತ್ತು ಶೇಕಡಾ ಮತಗಳಲ್ಲಿ ವಿಜೇತ ಅಭ್ಯರ್ಥಿ ಕನಿಷ್ಠ ಐವತ್ತು ಶೇಕಡಾ ಪಡೆದಿರಲೇಬೇಕೆಂಬ ನಿಯಮ ಮಾಡಬೇಕು. ಆಗ ಮತದಾನದ ಪ್ರಮಾಣವೂ ಹೆಚ್ಚುತ್ತದೆ ಮತ್ತು ಹೆಚ್ಚು ಜನರ ಒಲವಿರುವ ವ್ಯಕ್ತಿ ಆ ಜನರ ಪ್ರತಿನಿಧಿಯಾಗುತ್ತಾನೆಟಿಟಿ.

ಪಾಲಾಕ್ಷ ಮೇಷ್ಟ್ರು, ಇವ್ರು ಗೆದ್ಮೇಲಾದ್ರೂ ಅಲ್ಲಾಡ್ಕಂಡು, ಇಲ್ಲಾಡ್ಕಂಡು ಒಂದಲ್ಲಾ ಒಂದು ಶಂಕುಸ್ಥಾಪನೆ, ದಿನಾಚರಣೆ, ಮದ್ವೆ-ಮುಂಜಿ, ವಿದೇಶ ಪ್ರವಾಸ, ಭಿನ್ನಮತ, ಗುಂಪುಗಾರಿಕೆ, ದೆಹಲಿ ದೌಡು, ಸಭಾತ್ಯಾಗ, ಪಿತೂರಿ, ಹಗರಣ, ಲೋಕಸಭಾ, ಜಿಲ್ಲಾಪಂಚಾಯ್ತಿ, ರಾಜ್ಯಸಭಾ, ಗ್ರಾಮಪಂಚಾಯ್ತಿ, ವಿಧಾನಪರಿಷತ್, ತಾಲ್ಲೂಕು ಪಂಚಾಯತ್, ನಿಗಮ-ಮಂಡಳಿ ಕಿತ್ತಾಟ, ಪಕ್ಷ ಸಂಘಟನೆ, ಮುಷ್ಕರ, ಬಂದ್, ತಿಥಿ, ವಿಶ್ವಾಸಮತ ಹೀಗೇ ಇತ್ಯಾದಿಗಳ ನೆಪದಲ್ಲಿ ಕಳೀತಾರೆ ಬಿಡಿ. ಈ ತರಹ ಕಾಲ ಕಳೀಲಿಕ್ಕಾ ಜನ ಇವರನ್ನ ಆಯ್ಕೆ ಮಾಡಿರುವುದು? ಚುನಾವಣೆ, ಅಧಿಕಾರ, ಆಡಳಿತ ಮತ್ತೆ ಚುನಾವಣೆ.... ಇದೆಲ್ಲಾ ಇವರಿಗೊಂದು ರೀತಿಯ ಮನರಂಜನೆಯ ಸಾಧನ ಅಷ್ಟೇ. ಜನಪ್ರತಿನಿಧಿಗಳ ಸೇವಾ ನಿಯಮಗಳು ಹಾಗೂ ಮೂಲ ಕರ್ತವ್ಯಗಳನ್ನು ಸ್ಪಷ್ಟವಾಗಿ ನಿಗದಿಗೊಳಿಸಿ, ಪ್ರತೀ ತಿಂಗಳು ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸುವ ನಿಯಮ ಜಾರಿಗೆ ತರಬೇಕು. ಬಹುತೇಕರ ಬದುಕು ಅಕ್ರಮ ಮಾರ್ಗ ಅಥವಾ ಅದರ ಪಕ್ಕದ ಓಣಿಯ ಸಂದುಗೊಂದಿಗಳ ಆಸುಪಾಸಿನ ಅಡ್ಜಸ್ಟುಮೆಂಟುಗಳಲ್ಲೇ ನಡೆಯುತ್ತಿರುತ್ತದೆ. ಆ ಅಪರಾತಪರಾಗಳನ್ನೇ ರಾಜಮಾರ್ಗವೆಂದೋ ಅಥವಾ ಒಪ್ಪಿತ ಸಕ್ರಮ ಹಾದಿಯೆಂಬ ಭ್ರಮೆಯಲ್ಲಿ ನಾವೂ ಒಪ್ಪಿಕೊಂಡಿರುತ್ತೇವೆ. ನೈಜ ಕಾನೂನು, ನೀತಿ-ನಿಯಮಗಳು ಜಾರಿಗೆ ಬರಲು ಆರಂಭವಾದಾಗಲೇ ಆ ಅಸಂಬದ್ಧತೆಯ ನೀರಗುಳ್ಳೆಗಳು ನಿಜ ರೂಪದಲ್ಲಿ ಅನಾವರಣವಾಗತೊಡಗುತ್ತವೆ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248